ಅಧ್ಯಕ್ಷರು : ಈ ಪ್ರಶ್ನೆಗಳಿಗೆಲ್ಲಾ ಸಮಗ್ರವಾಗಿ ಉತ್ತರಕೊಡಿ.

ಇಸ್ರೇಲ್ ಮಾದರಿಯ ಕೃಷಿ ಪದ್ಧತಿ.

111 - ಶ್ರೀ ಜಯಚಂದ್ರ ಟಿ.ಬಿ. (ಕಳ್ಳಂಬೆಳ್ಳಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಸ್ರೇಲ್ ಮಾದರಿಯ ಕೃಷಿ ಪದ್ಧತಿಯನ್ನು ರಾಜ್ಯದಲ್ಲಿ ಅಳವಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಈ ಬಗ್ಗೆ ಅಮೂಲ್ಯ ಸಲಹೆಗಳನ್ನು ರೈತರ ಮನೆ ಬಾಗಿಲಿನಲ್ಲಿ ನೀಡಲು ಸರ್ಕಾರ ಹಾಕಿಕೊಂಡಿರುವ ಕ್ರಮಗಳೇನು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ರಾಜ್ಯ ಸರ್ಕಾರವು ಇಸ್ರೇಲ್ ದೇಶದಲ್ಲಿನ ವಿವಿಧ ಸಂಸ್ಥೆಗಳೊಡನೆ ಐದು ಒಡಂಬಡಿಕೆಯನ್ನು ಮಾಡಿಕೊಂಡಿದ್ದು ಅದರ ಪೈಕಿ ಮೂರು ಕೃಷಿ ಮತ್ತು ತೋಟಗಾರಿಕಾ ಕ್ಷೇತ್ರಗಳಿಗೆ ಸಂಬಂಧಪಟ್ಟಿದ್ದು ಇವುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ ಈ ಮೂರು ಕ್ಷೇತ್ರಗಳ ವಿವರಗಳು ಈ ಕೆಳಕಂಡಂತಿವೆ.

1. ಹತ್ತಿ ಅಭಿವೃದ್ಧಿ ಕುರಿತು ತರಬೇತಿ ಕಾರ್ಯಕ್ರಮ.
2. ಆಲೂಗಡ್ಡೆ ಮತ್ತು ತರಕಾರಿ ಬೀಜಗಳ ಉತ್ಪಾದನೆ.
3. ಪುಷ್ಪ ಕೃಷಿ.

ಆ) ಇದು ಪ್ರಾರಂಭಿಕ ಹಂತದಲ್ಲಿದ್ದು ಇದು ಸೂಕ್ತ ಹಾಗೂ ನಿರಂತರ ಕಂಡುಬಂದಲ್ಲಿ ಇವುಗಳನ್ನು ಕೃಷಿ ವಿಸ್ತಾರಣಾ ವ್ಯಂದದ ಮೂಲಕ ರೈತಾಪಿವರ್ಗಕ್ಕೆ ತಲುಪಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಉತ್ತರ ಒದಗಿಸಿರುವುದರ ಜೊತೆ ಇದಕ್ಕೆ ಸಂಬಂಧಿಸಿದಂತೆ ಇನ್ನೊಂದು ಪೂರಕ ಉತ್ತರ ಈ ರೀತಿಯಾಗಿದೆ. ತಹಲ್ ಕನಸಲ್ಟಿಂಗ್ ಇಂಜಿನಿಯರ್ಸ್ ಅವರೊಡನೆ ಬೆಂಗಳೂರಿನ ಒಳಚರಂಡಿ ನೀರನ್ನು ರಿಸೈಕ್ಲಿಂಗ್ ಮಾಡುವಂಥಾದ್ದು, ಕೋಲಾರ, ಬಿಜಾಪುರ, ಮೈಸೂರು ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಕಾಂಪ್ರಹೆನ್ಸೀವ್ ವಾಟರ್ ಮ್ಯಾನೇಜಮೆಂಟ್ ಮಾಡುವ ಬಗ್ಗೆ ಯೋಜನಾ ವರದಿಯನ್ನು ತಯಾರಿಸುವಂತಾದ್ದು, ಹತ್ತಿಯಲ್ಲಿ ಸಂಶೋಧನೆ ನಡೆಸಿ ಅದನ್ನು ಅಭಿವೃದ್ಧಿಪಡಿಸುವ ದಿಸೆಯಲ್ಲಿ ಹೋಸ್ಕಾಟ್ ಸಂಸ್ಥೆ ಜೊತೆ ಹಾಗೂ ಖಾಸಗಿ ರಂಗದಲ್ಲಿ ಪುಷ್ಪ ಕೃಷಿ ಮಾಡಲು ಸಯಾಜ್ ನರ್ಸರಿ ಸಂಸ್ಥೆ ಜೊತೆ ಮತ್ತು ಸಿನಾಡ್ಕೊ ಸಂಸ್ಥೆ ಜೊತೆ ಒಪ್ಪಂದ ಮಾಡಿಕೊಳ್ಳಲು ಮಾತುಕತೆಯಾಗುತ್ತಿದೆ. ಈ ಸಿನಾಡ್ಕೊ ಸಂಸ್ಥೆ ಜೊತೆ ಕೃಷಿ

ವಿಜ್ಞಾನಿಗಳು ಮತ್ತು ವಿಸ್ತರಣಾ ಅಧಿಕಾರಿ, ಸಿಬ್ಬಂದಿಗಳಿಲ್ಲರೂ ಇದ್ದು, ಇವರೆಲ್ಲಿರಗೂ ತರಬೇತಿ ಕಾರ್ಯಕ್ರಮ ಕೊಡುವುದಕ್ಕೋಸ್ಕರ ಮಾತುಕತೆ ಪ್ರಾರಂಭಿಕ ಹಂತದಲ್ಲಿದ್ದು, ಅದನ್ನು ಮುಂದುವರೆಸುವಂಥ ಇಚ್ಛೆ ಸರ್ಕಾರಕ್ಕೂ ಕೂಡ ಇದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಯೇನೆಂದರೆ ಈ ಇಸ್ರೇಲ್ ಮಾದರಿ ಕೃಷಿಯಲ್ಲಿನ ತಂತ್ರಜ್ಞಾನವನ್ನು ನಮ್ಮ ರಾಜ್ಯದಲ್ಲೂ ಕೂಡ ಅಳವಡಿಸುವುದಕ್ಕೆ ಏನು ಕ್ರಮ ಕೈಗೊಂಡಿದ್ದೀವೆಂದು ಈ ಹಿಂದೆ ಎರಡು ಬಾರಿ ಕೇಳಿದಾಗ ಒಂದು ಪ್ರಶ್ನೆ ಚುಕ್ಕೆ ಗುರ್ತಿನದಾಗಿದ್ದು, ಮತ್ತೊಂದು ಚುಕ್ಕೆ ಗುರ್ತಿಲ್ಲದ ಪ್ರಶ್ನೆಯಾಗಿದ್ದು ಈ ಎರಡೂ ಪ್ರಶ್ನೆಗಳಿಗೆ ಕೊಟ್ಟಂಥ ಉತ್ತರ ಬೇರೆ ಬೇರೆ ರೀತಿಯದಾಗಿದ್ದು, ನನಗೆ ಅನುಮಾನ ಬಂದಿದ್ದು ಅದಕ್ಕೋಸ್ಕರ ಕೇಳಿದೆ. ಈ ಕುರಿತ ಒಡಂಬಡಿಕೆಯನ್ನು ಕೆಲವು ಕಡೆ ಮಾಡಿಕೊಂಡಿದ್ದೀರಿ. ಈ ಒಡಂಬಡಿಕೆ ಎಂದರೇನು? ಯಾವ ರೀತಿ ಒಡಂಬಡಿಕೆ ಮಾಡಿಕೊಂಡಿದ್ದೀರಿ? ಅದು ಯಾವಾಗ ಪರಿಪೂರ್ಣವಾಗುತ್ತದೆ? ಕಾರ್ಯಾಚರಣೆಗೆ ಬರುವುದು ಯಾವಾಗ? ರೈತರಿಗೆ ಆ ಕುರಿತು ಬೋಧನೆ ಮಾಡುವುದು ಯಾವಾಗ? ತಮ್ಮ ಉತ್ತರದಲ್ಲಿ ನಿಖರವಾಗಿ ಹೇಳಿದಿರಿ. ನಾನು ಈ ಮೂಲ ಪ್ರಶ್ನೆ ಏಕೆ ಕೇಳಿದೆನೆಂದರೆ, ನಾನು ಯಾವುದೋ ಸಾಹಿತ್ಯ ಓದುವಂಥ ಸಂದರ್ಭದಲ್ಲಿ ನೋಡಿರುವಂತೆ, ಕನ್ನಂಬಾಡಿ ಕಟ್ಟೆಯಲ್ಲಿ ಸಂಗ್ರಹವಾಗಿರುವ ನೀರು ಇಡೀ ಇಸ್ರೇಲ್ ದೇಶದಲ್ಲಿರುವ ನೀರಿಗೆ ಸಮನಾಗಿದ್ದು, ಅವರ ಉತ್ಪಾದನೆ ಹೇಗಿದೆಯೆಂದರೆ ನಮ್ಮ ಭಾರತ ದೇಶದಲ್ಲಿ ಬೆಳೆಯುವ ಇಳುವರಿ ಎನಿದೆ, ಅದರ ಐದರಷ್ಟು ಜಾಸ್ತಿ ಅಲ್ಲಿರಬೇಕಾದರೆ ಅವರು ಅಳವಡಿಸಿರುವ ತಂತ್ರಜ್ಞಾನದ ಬಗ್ಗೆ ನಮಗೆ ಹೆಚ್ಚಿನ ಮಾಹಿತಿ ತರಿಸಬೇಕು. ಏಕೆಂದರೆ, ಇಸ್ರೇಲ್ ದೇಶ ಮರುಭೂಮಿಯಾಗಿದ್ದು, ಅಲ್ಲಿ ನೀರು ಇಲ್ಲದಿರುವಂಥ ಪರಿಸ್ಥಿತಿ ಇದ್ದು ಇಲ್ಲಿಯೂ ನಾವು ಅದೇ ಪರಿಸ್ಥಿತಿ ಎದುರಿಸುತ್ತಿರುವುದರಿಂದ ಅವರು ಯಾವ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೋ ಅದೇ ಪದ್ಧತಿಯನ್ನು ನಾವೂ ಅಳವಡಿಸಿಕೊಂಡರೆ ಬಹುಶಃ ಹೆಚ್ಚು ಲಾಭವಾಗಬಹುದೆನ್ನವ ದೃಷ್ಟಿಯಿಂದ ಪ್ರಶ್ನೆ ಕೇಳಿದ್ದೇನೆ. ಇದರ ಬಗ್ಗೆ ತಾವು ತಮ್ಮ ಉತ್ತರದಲ್ಲಿ ಸರಿಯಾಗಿ ಹೇಳಬೇಕಾಗುತ್ತದೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆಯಲ್ಲಿ ಇಸ್ರೇಲ್ ದೇಶದಲ್ಲಿ ಯಾವ ಮಾದರಿಯಲ್ಲಿ ಕೃಷಿ ತಂತ್ರಜ್ಞಾನವನ್ನು ಅಳವಡಿಸಿದ್ದಾರೆ, ಅದನ್ನೆಲ್ಲಾ ಚರ್ಚೆ ಮಾಡುವುದಕ್ಕಾಗುತ್ತದೆಯೇ?

ಶ್ರೀ ಟಿ.ಬಿ. ಜಯಚಂದ್ರ : ಈಗ ಸರ್ಕಾರ ಆ ದೇಶದ ವಿವಿಧ ಸಂಸ್ಥೆಗಳ ಜೊತೆ ಒಡಂಬಡಿಕೆ ಮಾಡಿಕೊಂಡಿದ್ದು, ಒಡಂಬಡಿಕೆಯ ಸ್ವರೂಪವೇನೆಂಬುನ್ನಾದರೂ ಹೇಳಬೇಕಲ್ಲ.

ಶ್ರೀ ಸಿ. ಬೈರೇಗೌಡ : ಇಸ್ರೇಲ್ ಅತ್ಯಂತ ಕಡಿಮೆ ನೀರು ಇರತಕ್ಕಂಥ ದೇಶವೆಂದು ಮಾನ್ಯ ಸದಸ್ಯರು ಹೇಳಿರುವುದು ನಿಜ. ಆದರೆ, ವ್ಯವಸಾಯ ಕ್ಷೇತ್ರದಲ್ಲಿ ಮಹತ್ತರವಾದ ಸಾಧನೆ ಸಾಧಿಸಿರುವ ಆ ದೇಶವನ್ನು ನಾನು ನೋಡಿಕೊಂಡು ಬಂದಿದ್ದೇನೆ. ಅಲ್ಲಿಗೆ ಪ್ರವಾಸ ಹೋಗುವ ಅವಕಾಶ ನಮ್ಮ ಸರ್ಕಾರ ನನಗೆ ಒದಗಿಸಿಕೊಟ್ಟಿತ್ತು.

ಆದರೆ, ಪ್ರಶ್ನೋತ್ತರ ವೇಳೆಯಲ್ಲಿ ಆ ಕುರಿತು ವಿವರವಾಗಿ ಹೇಳಲು ಸಾಧ್ಯವಾಗುವುದಿಲ್ಲ.

ಬಹುಶಃ ಇಲಾಖಾ ಬೇಡಿಕೆಗಳು ಚರ್ಚೆಗೆ ಬಂದಂಥ ಸಂದರ್ಭದಲ್ಲಿ ಈ ಕುರಿತು ವಿವರವಾಗಿ ಉತ್ತರ ನೀಡುತ್ತೇನೆ. ಪ್ರಸ್ತುತ ಕಾಂಪ್ರಹೆನ್ಸೀವ್ ವಾಟರ್ ಮಾನ್ಯೇಜಮೆಂಟ್ ಎನ್ನುವುದೇನಿದೆ, ಅದರ ಬಗ್ಗೆ ಈಗಾಗಲೇ ಹೇಳಿದ್ದೇನೆ. ಈ ಕಾರ್ಯಕ್ರಮವನ್ನು ನಾಲ್ಕು ಜಿಲ್ಲೆಗಳಲ್ಲಿ ತೆಗೆದುಕೊಳ್ಳಬೇಕೆನ್ನುವುದಕ್ಕೆ ತಹಲ್ ಕನಸಲ್ಟಿಂಗ್ ಇಂಜಿನಿಯರ್ಸ್ ಅವರು ಪುನಃ ಬಂದಿದ್ದು, ಆ ಕುರಿತ ಯೋಜನಾ ವರದಿ ತರಾಯಿಸಬೇಕೆಂದು ತಿಳಿಸಿದ್ದೇವೆ. ಇನ್ನು ಖಾಸಗಿ ರಂಗದಲ್ಲಿ ಸಯಾಜ್ ನರ್ಸರಿ ಸಂಸ್ಥೆ ಏನಿದೆ, ಅವರು ಖಾಸಗಿ ರಂಗದಲ್ಲಿ ಈಗಾಗಲೇ ಕೆಲವು ಕಡೆ ಸಹಯೋಗ ಮಾಡಿಕೊಂಡು ಕೆಲಸವನ್ನು ಪ್ರಾರಂಭಿಸಿದ್ದಾರೆ. ಇನ್ನು ಕೃಷಿ ವಿಜ್ಞಾನಿ, ವಿಸ್ತರಣಾಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲು ನಿನಾಡ್ಕೊ ಸಂಸ್ಥೆಯೊಡನೆ ಮಾತುಕತೆ ನಡೆಸುತ್ತಿದ್ದೇವೆ. ಅದೇ ರೀತಿ ಹತ್ತಿ ಬೆಳೆ ಉತ್ಪಾದನೆಯಲ್ಲಿ ಸಂಶೋಧನೆ ನಡೆಸಿ ಹೆಚ್ಚು ಅಭಿವೃದ್ಧಿಪಡಿಸುವ ದಿಸೆಯಲ್ಲಿ ನಾವು ನಮ್ಮ ಮುಖ್ಯಮಂತ್ರಿಗಳೊಡನೆ ಆ ದೇಶಕ್ಕೆ ಹೋಗಿದ್ದಂಥ ಸಂದರ್ಭದಲ್ಲಿ ಹೊಸ್ಕಾಟ್ ಸಂಸ್ಥೆಯೊಡನೆ ಮೆಮೊರಾಂಡಮ್ ಆಫ್ ಅಂಡರ್‌ಸ್ಟಾಂಡಿಂಗ್ ರುಜು ಮಾಡಿ ಬಂದಿದ್ದೇವೆ. ನಾವು ಆ ಕುರಿತು ಮುಂದಿನ ಕ್ರಮಗಳನ್ನು ಕೈಗೊಳ್ಳುವ ಹಂತದಲ್ಲಿದ್ದೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಕೃಷಿ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಕೃಷಿ ಕ್ಷೇತ್ರದಲ್ಲಿ ಇಸ್ರೇಲ್ ದೇಶ ಸಾಧಿಸಿರುವ ಪ್ರಗತಿಯನ್ನು ಅಧ್ಯಯನ ಮಾಡಿಕೊಂಡು ಬರಲು ಆ ದೇಶಕ್ಕೆ ಸುಮಾರು 200-250 ರೈತರನ್ನು ಕಳುಹಿಸಿಕೊಡುವಂಥ ಒಂದು ಯೋಜನೆಯಿರುವುದರಿಂದ ಅದರಲ್ಲಿ ಸರ್ಕಾರದ ಪಾತ್ರವೇನು? ಪ್ರವಾಸ ಹೋಗುವಂತಹವರಿಗೆ ಸರ್ಕಾರವೇನಾದರೂ ಸಬ್ಸಿಡಿ ಕೊಡುವ ಯೋಚನೆ ಮಾಡಿದೆಯೇ? ಪ್ರತಿಯೊಬ್ಬರೂ ಐವತ್ತು ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಪ್ರಕಟವಾಗಿರುವುದನ್ನು ದಿನಪತ್ರಿಕೆಯಲ್ಲಿ ಓದಿದ್ದೇನೆ. ಇದರ ಬಗ್ಗೆ ಸರ್ಕಾರದ ನಿಲುವೇನು? ರೈತರನ್ನು ಆ ದೇಶಕ್ಕೆ ಕಳುಹಿಸುವುದರಿಂದ ಅಲ್ಲಿನ ಕೃಷಿ ತಂತ್ರಜ್ಞಾನದ ಬಗ್ಗೆ ಅಧ್ಯಯನ ಮಾಡಿ ಅವರ ಜ್ಞಾನ ಬೆಳೆಯುವುದರಿಂದ ಇದರಲ್ಲಿ ಸರ್ಕಾರದ ಪಾತ್ರವೇನು? ಎಂದು ದಯಮಾಡಿ ತಿಳಿಸಬೇಕು.

ಶ್ರೀ ಸಿ. ಬೈರೇಗೌಡ : ರೈತರು ಆ ದೇಶಕ್ಕೆ ಹೋಗಿ ನೋಡಿಕೊಂಡು ಬರುವುದು ಬಹಳ ಸೂಕ್ತವೆಂದು ತಿಳಿಸುತ್ತಾ ಇದರಿಂದ ನಮ್ಮ ರೈತರ ಕಣ್ಣು ವಿಶಾಲವಾಗಿ ತೆರೆದಂತಾಗುತ್ತದೆ ಎಂಬುದನ್ನು ಒಪ್ಪುತ್ತೇನೆ. ಆದರೆ, ಪ್ರಸ್ತುತ ರೈತರಿಗೆ ಯಾವುದೇ ತರಹದ ನೆರವನ್ನು ಕೊಡುವಂಥ ಪರಿಸ್ಥಿತಿಯಲ್ಲಿ ಸರ್ಕಾರವಿಲ್ಲವೆಂದು ಹೇಳ ಬಯಸುತ್ತೇನೆ. ಅಲ್ಲಿ ವ್ಯವಸ್ಥೆ ಮಾಡಿ ಅವರಿಗೆ ಮಾರ್ಗದರ್ಶನ ಕೊಡುವಂಥ ವ್ಯವಸ್ಥೆಯ ಹಂತದಲ್ಲಿ ಮಾತ್ರ ನಮ್ಮ ಸರ್ಕಾರ ಇದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಐವತ್ತು ಸಾವಿರ ರೂಪಾಯಿಗಳಲ್ಲಿ ಕನಿಷ್ಠ ಅರ್ಧದಷ್ಟು ಹಣವನ್ನು ಅಂದರೆ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಸಬ್ಸಿಡಿಯಾಗಿ ಕೊಡುವಂಥ ಉಪಕಾರ ಮಾಡಿದರೆ ರೈತರು ಅಲ್ಲಿಗೆ ಹೋಗಿ ಬರಲು ಅನುಕೂಲವಾಗುತ್ತದೆ. ಸರ್ಕಾರ ಅಷ್ಟಾದರೂ ಮಾಡಬಹುದಲ್ಲವೇ?

ಶ್ರೀ ಸಿ. ಬೈರೇಗೌಡ : ಇದಕ್ಕಾಗಿ ಅಪಾರವಾದ ಹಣ ಖರ್ಚಾಗುತ್ತದೆ. ಸರ್ಕಾರ ಈ ರೀತಿಯ ಕಾರ್ಯಕ್ರಮ ಹಮ್ಮಿಕೊಂಡು ಮಾಡುತ್ತದೆಂದರೆ ಬರೀ ಒಬ್ಬರಲ್ಲ, ನಾಮುಂದು, ತಾ ಮುಂದು ಎಂದು

ಬಹಳ ಜನರು ಬರುತ್ತಾರೆ, ನಾವು ಇದಕ್ಕೆ ಯಾರನ್ನು ಚುನಾಯಿಸುವುದು? ಇದಕ್ಕೆ ಏನು ಆಧಾರವಿರಬೇಕು? ಈ ಹಿಂದೆ 'ಜಪಾನ್-ಎಕ್ಸಪೋ'ಗೆ ರೈತ ವಿದ್ಯಾರ್ಥಿಗಳನ್ನು ಕಳುಹಿಸಿದಂಥ ಸಂದರ್ಭದಲ್ಲಿ ಏನಾಯಿತೆಂಬುದು ಗೊತ್ತಿದೆ! ಈ ಎಲ್ಲಾ ಅನುಭವದ ಹಿನ್ನೆಲೆಯಲ್ಲಿ ಸರ್ಕಾರದಿಂದ ಯಾವುದೇ ರೀತಿಯ ಹಣಕಾಸಿನ ನೆರವನ್ನೂ ಕೊಡದಿರುವುದು ಸೂಕ್ತವೆಂಬ ತೀರ್ಮಾನಕ್ಕೆ ಸರ್ಕಾರ ಬಂದಿದೆ. ಆದರೆ, ಇಸ್ರೇಲನ ಕೃಷಿ ತಂತ್ರಜ್ಞಾನದ ಬಗ್ಗೆ ಮಾರ್ಗದರ್ಶನ ಬೇಕಾಗಿದ್ದರೆ ಎಂಬಿಸ್ಸಿ ಮೂಲಕ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಪಡುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮುಖ್ಯಮಂತ್ರಿಗಳು ವಿದೇಶಕ್ಕೆ ಪ್ರವಾಸ ಹೋಗಿ ಬಂದಂಥ ಸಂದರ್ಭದಲ್ಲಿ ಕರ್ನಾಟಕ ಕೆಲವು ಶಾಸಕ ಮಿತ್ರರೂ ಸಹ ಆ ಅನುಭವ ಪಡೆದುಕೊಳ್ಳುವುದಕ್ಕೆ ಇಸ್ರೇಲಗೆ ಕರೆದುಕೊಂಡು ಹೋಗುವ ಬಗ್ಗೆ ನಿರ್ಣಯ ಮಾಡುವುದಾಗಿ ಹೇಳಿದ್ದರು. ಇದರ ಬಗ್ಗೆ ಸರ್ಕಾರವೇನಾದರೂ ಆಲೋಚಿಸಿದೆಯೇ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಇದರ ಬಗ್ಗೆ ಸರ್ಕಾರ ಪ್ರಯತ್ನಿಸಿದರೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ, ಪ್ರತಿಯೊಬ್ಬ ರೈತರೂ ಐವತ್ತು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಇಸ್ರೇಲಗೆ ಹೋಗಿ ಅಲ್ಲಿನ ಕೃಷಿ ತಂತ್ರಜ್ಞಾನದ ಬಗ್ಗೆ ಆಳವಾದ ಅಧ್ಯಯನ ಮಾಡುವುದು ನಿಜವಾಗಿಯೂ ಅಸಾಧ್ಯ.

ಮಾಲೂರು ನಗರದಲ್ಲಿ ತೋಟಗಾರರ ಸಹಕಾರ ಸಂಘದ ಮಳಿಗೆ ಸ್ಥಾಪನೆ.

113 - ಮಾನ್ಯ ತೋಟಗಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) *ಮಾಲೂರು ನಗರದಲ್ಲಿ ತೋಟಗಾರರ ಸಹಕಾರ ಸಂಘದ ಮಳಿಗೆ ಸ್ಥಾಪನೆ ಮಾಡಲು ಉದ್ದೇಶಿಸಿದೆಯೇ?*

ಆ) *ಈ ಸಹಕಾರ ಸಂಘಕ್ಕೆ ನಿವೇಶನ ಮಂಜೂರಾಗಿದೆಯೇ? ಎಷ್ಟು ವರ್ಷವಾಯಿತು.*

ಇ) *ಸಹಕಾರ ಸಂಘದ ಮಳಿಗೆ ಪ್ರಾರಂಭಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?*

ಶ್ರೀ ಸಿ. ಬೈರೇಗೌಡ (ತೋಟಗಾರಿಕೆ ರಾಜ್ಯ ಸಚಿವರ ಪರವಾಗಿ ಕೃಷಿ ಮಂತ್ರಿಗಳು) :

ಅ) ಹೌದು.

ಆ) ಈ ಸಹಕಾರ ಸಂಘಕ್ಕೆ ಮಾಲೂರು ಕೇಂದ್ರ ಸ್ಥಾನದಲ್ಲಿ ``95x241" (ನವಿಲುಕುಂಟೆ) ಜಾಗವನ್ನು ಮಾಲೂರು ಪುರಸಭೆಯ ವತಿಯಿಂದ ನೀಡಿರುತ್ತಾರೆ. ನಿವೇಶನವು ಬಿಡುಗಡೆಯಾಗಿ ಎರಡು ವರ್ಷಗಳಾದರು.

ಇ) ಸಂಘದ ಆಡಳಿತ ಮಂಡಳಿಯ ನಿರ್ಣಯದ ಪ್ರಕಾರ ಒಂದು ಹಣ್ಣು ತರಕಾರಿ